ನಿವೇಶನಗಳ ಹಂಚಿಕೆಗಾಗಿ ಭೂ ಸ್ವಾಧೀನ

493(314); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಬಂಗಾರಪೇಟೆ ತಾಲ್ಲೂಕು ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆಗಾಗಿ ಭೂ ಸ್ವಾಧೀನ ಮಾಡಿಕೊಂಡಿರುವ ಪ್ರದೇಶವೆಷ್ಟು; ಈ ಭೂ ಸ್ವಾಧೀನಕ್ಕಾಗಿ ಸಂದಾಯ ಮಾಡಿರುವ ಪರಿಹಾರವೆಷ್ಟು;

ಆ) ಈ ಅವಧಿಯಲ್ಲಿ ಪ್ರಾಧಿಕಾರದಿಂದ ಎಷ್ಟು ನಿವೇಶನಗಳನ್ನು ಹಂಚಲಾಗಿದೆ; ಅರ್ಜಿದಾರರಿಂದ ಸ್ವೀಕರಿಸಲಾದ ಹಣವೆಷ್ಟು;

ಇ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಗ್ರಾಮಗಳಿಗೆ ಸಂಬಂಧಪಟ್ಟ ವಾಸೋಪಯೋಗಿ, ಕೈಗಾರಿಕೆ, ವಾಣಿಜ್ಯ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಲು ಎಷ್ಟು ಪ್ರಕರಣಗಳಿಗೆ ನಿರಾಪೇಕ್ಷಣಾ ಪತ್ರ ನೀಡಲಾಗಿದೆ. ಎಷ್ಟು ಬಡಾವಣೆಗಳ ವಿನ್ಯಾಸ ಅನುಮೋದಿಸಲಾಗಿದೆ ಇದರ ಬಾಬ್ತು ಸಂದಾಯವಾಗಿರುವ ಭೂ ಅಭಿವೃದ್ಧಿ ಶುಲ್ಕ, ಬೆಟರ್ ಮೆಂಟ್ ಶುಲ್ಕ ಮತ್ತು ಇತರೆ ಶುಲ್ಕದ ಬಾಬತ್ತು ಮೊತ್ತ ಎಷ್ಟು (ಪ್ರತ್ಯೇಕ ವಿವರ ನೀಡುವುದು);

ಈ) ಬಂಗಾರಪೇಟೆ ತಾಲ್ಲೂಕಿನಲ್ಲಿ ಬಡಾವಣೆ ವಿನ್ಯಾಸ ಅನುಮೋದನೆಯಾಗಿರುವ ಪ್ರಕರಣಗಳಲ್ಲಿ ಸರ್ಕಾರಕ್ಕೆ ಕಾಯ್ದಿರಿಸಲಾದ ಉದ್ಯಾನವನ, ಆಟದ ಮೈದಾನ ಇತರೆ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಪ್ರದೇಶಗಳನ್ನು ಯಾರಿಗಾದರೂ ಪರಭಾರೆ ಮಾಡಲಾಗಿದೆಯೇ: ಯಾರಿಗೆ ಯಾವ ಉದ್ದೇಶಕ್ಕಾಗಿದೆ (ವಿಸ್ತೀರ್ಣವನ್ನೊಳಗೊಂಡಂತೆ ಮಾಹಿತಿ ನೀಡುವುದು);

ಉ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದಿಂದ ತಾಲ್ಲೂಕಿನಲ್ಲಿ ಎಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ, ಅದರ ಮೌಲ್ಯ ಎಷ್ಟು, ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ, ಅದಕ್ಕೆ ಖರ್ಚು ಮಾಡಿರುವ ಹಣವೆಷ್ಟು? (ಪ್ರತ್ಯೇಕ ವಿವರ ನೀಡುವುದು)

ಶ್ರೀ ವಿನಯಕುಮಾರ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಬಂಗಾರಪೇಟೆ ತಾಲ್ಲೂಕಿನಲ್ಲಿ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಯೋಜನೆ ರೂಪಿಸಲು ಭೂ ಸ್ವಾಧೀನ ಮಾಡಿಕೊಂಡಿರುವುದಿಲ್ಲ. ಆದರೆ ಹೊಸದಾಗಿ ವಸತಿ ಯೋಜನೆ ರೂಪಿಸಲು ಉದ್ದೇಶಿಸಿರುವ ಗರುಡಾದ್ರಿಹಳ್ಳಿ ಮತ್ತು ಗುಟ್ಟಹಳ್ಳಿಯಲ್ಲಿ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 32 ಎಕರೆ 28.5 ಗುಂಟೆ ಜಮೀನನ್ನು 60:40 ಅನುಪಾತದಡಿ ಎಂಓಯು ಮೂಲಕ ಸ್ವಾಧೀನಕ್ಕೆ ಪಡೆಯಲಾಗಿದೆ. 60:40ರ ಯೋಜನೆಯಡಿಯಲ್ಲಿ ಪರಿಹಾರವನ್ನು ಮೊತ್ತದ ರೂಪದಲ್ಲಿ ಪಾವತಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಕಳೆದ ಮೂರು ವರ್ಷಗಳಲ್ಲಿ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಾಜೀವ್ ಗಾಂಧಿ ವಸತಿ ಬಡಾವಣೆಯಲ್ಲಿ 34 ಮೂಲೆ ನಿವೇಶನಗಳನ್ನು ಬಹಿರಂಗ ಹರಾಜು ಮೂಲಕ ಮತ್ತು ಉಳಿದ 21 ಸಾಮಾನ್ಯ ನಿವೇಶನಗಳನ್ನು ಲಾಟರಿ ಎತ್ತುವ ಮೂಲಕ ಹಂಚಿಕೆ ಮಾಡಲಾಗಿದೆ. ಸದರಿ ನಿವೇಶನಗಳಿಂದ ಒಟ್ಟು ₹ 2,86,79,329/– ಗಳನ್ನು ಅರ್ಜಿದಾರರಿಂದ ಸ್ವೀಕರಿಸಲಾಗಿದೆ.

ಇ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಾಸೋಪಯೋಗಿ, ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು 90 ಪ್ರಕರಣಗಳಿಗೆ ನಿರಾಪೇಕ್ಷಣಾ ಪತ್ರ ನೀಡಲಾಗಿದೆ. 19 ಬಡಾವಣೆಗಳ ವಿನ್ಯಾಸ ಅನುಮೋದಿಸಲಾಗಿದೆ. ಇದರ ಬಾಬ್ತು ಸಂದಾಯವಾಗಿರುವ ಶುಲ್ಕಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಶುಲ್ಕದ ವಿವರಗಳು	ಮೊತ್ತ
1	ಭೂ ಅಭಿವೃದ್ಧಿ ಶುಲ್ಕ	–
2	ಪರಿಶೋಧನೆ ಶುಲ್ಕ	1,82,756–00
3	ಬೆಟರ್‌ಮೆಂಟ್ ಶುಲ್ಕ (ಉತ್ತಮತೆ ಶುಲ್ಕ)	9,79,835–00
4	ಕೊಳಚೆ ಶುಲ್ಕ	1,90,800–00
5	ಮೇಲ್ವಿಚಾರಣೆ ಶುಲ್ಕ	36,17,367–00
6	ಇತರೆ ಶುಲ್ಕ	3,21,995–00

ಈ) ಬಂಗಾರಪೇಟೆ ತಾಲ್ಲೂಕಿನಲ್ಲಿ ಬಡಾವಣೆ ವಿನ್ಯಾಸ ಅನುಮೋದಿಸಿರುವ ಪ್ರಕರಣಗಳಲ್ಲಿ ಸರ್ಕಾರಕ್ಕೆ ಕಾಯ್ದಿರಿಸಿರುವ ಉದ್ಯಾನವನ ಮತ್ತು ಆಟದ ಮೈದಾನ ಇತರೆ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಪ್ರದೇಶವನ್ನು ಅಂದರೆ, ನಾಗರೀಕ ಸೌಲಭ್ಯ ನಿವೇಶನಗಳನ್ನು ಬಂಗಾರಪೇಟೆ ಸರ್ವೆ ನಂಬರ್ 64 ಮತ್ತು 68ರಲ್ಲಿ ರಹೀಂಉನ್ನಿಸಾ ಬಡಾವಣೆಯಲ್ಲಿ 9,478.26 ಚದರ ಅಡಿ ಪ್ರದೇಶವನ್ನು ಉಪನೋಂದಣಾಧಿಕಾರಿಗಳು, ಬಂಗಾರಪೇಟೆ ಇವರಿಗೆ ಕಛೇರಿ ಉಪಯೋಗಕ್ಕಾಗಿ ನಾಗರೀಕ ಸೌಕರ್ಯ ನಿವೇಶನ ಹಂಚಿಕೆ ನಿಯಮ 1991ರ ಪ್ರಕಾರ ಹಂಚಿಕೆ ಮಾಡಲಾಗಿದೆ.

ಊ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದಿಂದ ಪೊಟ್ಟಪಲ್ಲಿ ರಾಜೀವ್ ಗಾಂಧಿ ವಸತಿ ಬಡಾವಣೆಯಲ್ಲಿ ರಸ್ತೆ ಕಾಮಗಾರಿಗಳು, ಕುಡಿಯುವ ನೀರು ಸರಬರಾಜು ವ್ಯವಸ್ಥೆ, ಒಳಚರಂಡಿ ನಿರ್ಮಾಣ, ಕಲ್ವರ್ಟ್ ಕಾಮಗಾರಿ ಮತ್ತು ಉದ್ಯಾನವನಗಳಿಗಾಗಿ ಈವರೆಗೆ ಒಟ್ಟು ₹ 2,23,04,842/– ಗಳನ್ನು ವೆಚ್ಚ ಮಾಡಲಾಗಿದೆ. ಒಳಚರಂಡಿ ಕಾಮಗಾರಿ ಕೆಲಸ ಶೇ:90ರಷ್ಟು ಮುಗಿದಿದ್ದು, ಉಳಿದಂತೆ ರಸ್ತೆ, ಮೋರಿ, ನೀರು ಸರಬರಾಜು ಕಾಮಗಾರಿಗಳು ಮುಗಿದಿರುತ್ತದೆ.

ಬಂಗಾರಪೇಟೆ ಕ್ಷೇತ್ರ ಮತ್ತು ಕೆ.ಜಿ.ಎಫ್. ಕ್ಷೇತ್ರದಲ್ಲಿ 07 ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅದರ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಅಂದಾಜು ಮೌಲ್ಯ	ಕಾಮಗಾರಿಯ ಹಂತ	ವೆಚ್ಚ
1	ರಹೀಂಉನ್ನಿಸಾ ಬಡಾವಣೆ ಉದ್ಯಾನವನ	16.00 ಲಕ್ಷ	ಪ್ರಗತಿಯಲ್ಲಿದೆ	5.7 ಲಕ್ಷ
2	ಎಂ.ವಿ. ನಗರ ಉದ್ಯಾನವನ	15.50 ಲಕ್ಷ	ಮುಗಿದಿರುತ್ತದೆ	15.50 ಲಕ್ಷ
3	ಹೆಚ್.ಪಿ. ನಗರ ಉದ್ಯಾನವನ	15.00 ಲಕ್ಷ	ಪ್ರಗತಿಯಲ್ಲಿದೆ	9.65 ಲಕ್ಷ
4	ಭಾರತ್ ನಗರ ಉದ್ಯಾನವನ	4.00 ಲಕ್ಷ	ಮುಗಿದಿರುತ್ತದೆ	4.00 ಲಕ್ಷ
5	ಕೆ.ಜಿ.ಎಫ್. ನಲ್ಲಿ ಪೈಪ್‌ಲೈನ್ ಹತ್ತಿರ ಉದ್ಯಾನವನ	16.00 ಲಕ್ಷ	ಮುಗಿದಿರುತ್ತದೆ	16.00 ಲಕ್ಷ
6	ಚಂಪಾಲಾಲ್ ಲೇಔಟ್ ಉದ್ಯಾನವನ	15.00 ಲಕ್ಷ	ಪ್ರಗತಿಯಲ್ಲಿದೆ	10.39 ಲಕ್ಷ
7	ವಿವೇಕ್‌ನಗರ ಉದ್ಯಾನವನ	7.00 ಲಕ್ಷ	ಪ್ರಗತಿಯಲ್ಲಿದೆ	2.88 ಲಕ್ಷ